ಪ್ರಮಾಣ ವಚನ ಬೋಧಿಸಿದ ದಿನಾಂಕಃ **16.10.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ಸರ್ವೆ ನಂ.**26/2** ರಲ್ಲಿ ನಾನು **3** ಎಕರೆ **32** ಗುಂಟೆಯನ್ನು ಅದರಲ್ಲಿ **9** ಗುಂಟೆ ಕರಾಬು ಹೊರತುಪಡಿಸಿ **3** ಎಕರೆ **23** ಗುಂಟೆ ಜಮೀನನ್ನು ದಿನಾಂಕಃ**18.01.1990** ರಂದು ಖರೀದಿಸಿದ್ದೇನೆ. ಸದರಿ ಆಸ್ತಿಯನ್ನು  ನಾನು ಸುಬ್ಬಣ್ಣ, ರಾಮಾಂಜಿನಪ್ಪ, ಶಾಮಣ್ಣ ಮತ್ತು ನರಸಿಂಹಮೂರ್ತಿ ರವರ ಕಡೆಯಿಂದ ಖರೀದಿಸಿದ್ದೇನೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಸದರಿ ಕ್ರಯಪತ್ರದಲ್ಲಿ ಸದರಿ ಆಸ್ತಿಯು ಸುಬ್ಬಣ್ಣ ಮತ್ತು ಅವರ ಮಕ್ಕಳ ಪಿತ್ರಾರ್ಜಿತ ಆಸ್ತಿ ಎಂದು ಬರೆಯಲಾಗಿದೆ ಎಂದರೆ ಸರಿ. ದಿನಾಂಕಃ **29.11.1991** ರಂದು ಸರ್ವೆ ನಂ.**24** ರಲ್ಲಿ **1** ಎಕರೆ **3** ಗುಂಟೆಯನ್ನು ಸುಬ್ಬಣ್ಣ ಮತ್ತು ಅವರ ಮಕ್ಕಳ ಕಡೆಯಿಂದ ಖರೀದಿಸಿದ್ದೇನೆ. ಸದರಿ ಜಮೀನಿನ ಕ್ರಯಪತ್ರದಲ್ಲೂ ಕೂಡ ಸದರಿ ಆಸ್ತಿಯು ಸುಬ್ಬಣ್ಣನವರ ಪಿತ್ರಾರ್ಜಿತ ಆಸ್ತಿ ಎಂದು ನಮೂದಾಗಿದೆ ಎಂದರೆ ಸರಿ. ಈ ಎರಡು ಆಸ್ತಿಗಳನ್ನು ಹೊರತುಪಡಿಸಿ ಸುಬ್ಬಣ್ಣ ಮತ್ತು ಅವರ ಮಕ್ಕಳಿಗೆ ಸಾಕಷ್ಟು ಬೇರೆ ಆಸ್ತಿಗಳು ಇದ್ದವು ಎಂದರೆ ಗೊತ್ತಿಲ್ಲ ಇರಬಹುದು. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ವಿಭಾಗವಾಗಿದೆ ಎಂದು ತಿಳಿಸಿದ್ದು, ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ವಿಭಾಗ ಆಗಿದೆ ಎಂದು ತೋರಿಸಲು ಯಾವುದೇ ಆಧಾರ ಇಲ್ಲದಿದ್ದರೂ ಕೂಡ ವಿಭಾಗವಾಗಿದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಗೊತ್ತಿಲ್ಲದೇ ಹಾಕಿದ್ದೇನೆ ಎಂದು ಹೇಳುತ್ತಾರೆ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ

ಹಾಕಿರುವ ಈ ದಾವೆಯಲ್ಲಿ ಅವರು ವಿಭಾಗ ಮಾಡಿಕೊಳ್ಳಲು ನಿಮಗೆ ಏನಾದರೂ ತೊಂದರೆ ಇದೆಯಾ ಎಂದರೆ ಇಲ್ಲ.

ಮರು ವಿಚಾರಣೆ ಇರುವುದಿಲ್ಲ

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.